**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ. ಸಿ.ಸಿ ನಂ.708/2024.**

ಪಿರ್ಯಾದುದಾರರುಃ- ನಾರಾಯಣ ಚಂದ್ರಹಾಸ ಬಲಿಮನೆ ,
ವಯಸ್ಸು ಸುಮಾರುಃ- 54 ವರ್ಷ,
ಉದ್ಯೋಗಃ- ವ್ಯಾಪಾರ ,
ಸಾಕೀನಃ- ರಾಮತೀರ್ಥ , ಹೊನ್ನಾವರ ,
ತಾಲೂಕುಃ- ಹೊನ್ನಾವರ (ಉ.ಕ).

**-ವಿರುದ್ಧ-**

ಆರೋಪಿಯ ಹೆಸರುಃ- ವಿದ್ಯಾ ಶೇಖರ ಅಂಬಿಗ ,
ವಯಸ್ಸು ಸುಮಾರುಃ- 29 ವರ್ಷ,
ಉದ್ಯೋಗಃ- ವ್ಯಾಪಾರಿ ,
ಸಾಕೀನಃ- ದೇವರಬೋಳೆ , ಲುಕ್ಕೇರಿ ,
ಮಾಸೂರು ,
ತಾಲೂಕುಃ- ಕುಮಟಾ (ಉ.ಕ).

**ಆಪಾದನೆ**

ಶ್ರೀ ಈರಣ್ಣ ಹುಣಶಿಕಟ್ಟಿ, ಬಿ.ಕಾಂ., ಎಲ್.ಎಲ್.ಬಿ., ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡ ಆಪಾದನೆ ಹೊರಿಸುತ್ತಿದ್ದೇನೆ.

ಆರೋಪಿಯಾದ ನೀವು, ಪಿರ್ಯಾದಿಯವರಿಂದ ಅತೀ ಜರೂರಾಗಿ ಹಣದ ಅವಶ್ಯಕತೆ ಇದೆ ಎಂದು ಹೇಳಿ ಹಾಗೂ ನೀವು ಟೇಲರಿಂಗ್ ಮಾಡುತ್ತೇನೆಂದು ಮತ್ತು ಕುಮಟಾದಲ್ಲಿ ನಮ್ಮ ಬಟ್ಟೆ ಅಂಗಡಿ ಇರುತ್ತದೆ ಎಂದು ಹೇಳಿ, ಹಣವನ್ನು 15 ದಿನಗಳೊಳಗೆ ಮರುಪಾವತಿಸುತ್ತೇನೆಂದು ಭರವಸೆ ನೀಡಿದ್ದು, ಪಿರ್ಯಾದಿಯಿಂದ ಕೈಗಡವಾಗಿ 2,20,000/- ಗಳನ್ನು ಸಾಲವಾಗಿ ಪಡೆದುಕೊಂಡಿದ್ದು, ಸದರಿ ಸಾಲದ ಮರುಪಾವತಿಗಾಗಿ ನೀವು ಪಿರ್ಯಾದಿ ಹೆಸರಿಗೆ ನಿಮ್ಮ ಬ್ಯಾಂಕ್ ಖಾತೆಯುಳ್ಳ **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ., ಕುಮಟಾ** ಶಾಖೆಯ ಚೆಕ್ ನಂ.244490 ನ್ನು ದಿನಾಂಕ 13/05/2024 ರಂದು ರೂ.2,20,000/- ಎಂದು ನಮೂದಿಸಿ ಚೆಕ್ ಗೆ ಸಹಿ ಮಾಡಿಕೊಟ್ಟು, ಸದರಿ ಚೆಕ್ ನ್ನು ಬ್ಯಾಂಕ್ ಗೆ ಹಾಜರುಪಡಿಸಿದ ಕೂಡಲೇ ಹಣ ಸಿಗುತ್ತದೆ ಎಂದು ಭರವಸೆ ನೀಡಿದ್ದು, ಅದರಂತೆ ಪಿರ್ಯಾದಿಯವರು ಹಣ

ಪಡೆಯುವ ಸಲುವಾಗಿ ಸದರಿ ಚೆಕನ್ನು ಅವರ ಖಾತೆಯಿರುವ **ಕೆನರಾ ಬ್ಯಾಂಕ್., ಹೊನ್ನಾವರ** ಶಾಖೆಯಲ್ಲಿ ಹಾಜರುಪಡಿಸಿದಾಗ, ಸದರಿ ಬ್ಯಾಂಕ್ ನವರು, ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ "Funds Insufficient" ಎಂದು ತಿಳಿಸಿ ಸದರಿ ಚೆಕನ್ನು ದಿನಾಂಕ 14/05/2024 ರಂದು ಮೆಮೋದೊಂದಿಗೆ ವಾಪಾಸ್ ನೀಡಿರುತ್ತಾರೆ. ಈ ಕುರಿತು ಪಿರ್ಯಾದಿಯವರು ನಿಮಗೆ ವಕೀಲರ ಮೂಲಕ ದಿನಾಂಕ 22/06/2024 ರಂದು ರಿಜಿಸ್ಟರ್ ನೋಟಿಸ್ ಕಳುಹಿಸಿದ್ದು, ಅದನ್ನು ಅಂಚೆ ಇಲಾಖೆಯವರು ನಿಮಗೆ ದಿನಾಂಕ 24/06/2024 ರಂದು Intimation ನೀಡಿದ್ದು, ಸದರಿ Intimation ನಿಮಗೆ ಜಾರಿಯಾದರೂ ಸಹ ನೀವು ದಿನಾಂಕ 01/07/2024 ರವರೆಗೆ ಸ್ವೀಕರಿಸದೇ ಇರುವ ಕಾರಣ, ದಿನಾಂಕ 02/07/2024 ರಂದು ವಾಪಾಸ್ ಬಂದಿರುತ್ತದೆ ಹಾಗೂ ನೀವು ಸದರಿ ಚೆಕ್ ನಲ್ಲಿ ನಮೂದಿಸಿದ ಹಣವನ್ನು ಸಹ ನೀಡದೇ ನೆಗೋಶಿಯೆಬಲ್ ಇನ್ ಸ್ಟ್ರುಮೆಂಟ್ ಕಾಯಿದೆ ಕಲಂ. 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಪ್ರಶ್ನೆ1: ಈಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?

ಆರೋಪಿಯ ಉತ್ತರ : ತಿಳಿಯಿತು.

ಪ್ರಶ್ನೆ 2: ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ?

ಆರೋಪಿಯ ಉತ್ತರ : ವಿಚಾರಣೆಯಾಗಬೇಕು.

( ಈ ಮೂಲಕ ಪ್ರಮಾಣಿಸುವುದೇನೆಂದರೆ ಆರೋಪಿಯು ಕೊಟ್ಟಂತ ಹೇಳಿಕೆಯ ಉತ್ತರವನ್ನು ಪಡೆಯಲಾಗಿದೆ )

ಸಹಿ ಇದೆ.

**ದಿನಾಂಕಃ- 18-12-2024.**

**(ಈರಣ್ಣ ಹುಣಶಿಕಟ್ಟಿ).,**
**ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ.ರವರ ನ್ಯಾಯಾಲಯ.,ಹೊನ್ನಾವರ.**

ಆರೋಪಿಯ ಸಹಿಃ-

ಸಹಿ ಇದೆ.

****